ಆ) 21872

ಇ) ಕೈಗಾರಿಕಾ ನೀತಿಯನ್ವಯ ಕೈಗಾರಿಕೆಗಳಿಗೆ ನೀಡಲಾಗುವ ಸೌಲಭ್ಯ ರಿಯಾಯಿತಿಗಳನ್ನು ಡಾ ಸರೋಜಿನಿ ಮಹಿಷಿ ವರದಿಯನ್ವಯ ಕನ್ನಡಿಗರಿಗೆ ಸ್ಥಳೀಯರಿಗೆ ಉದ್ಯೋಗ ನೀಡಿದಲ್ಲಿ ಮಾತ್ರ ಕೈಗಾರಿಕಾ ಘಟಕಗಳಿಗೆ ನೀಡಲಾಗುವುದೆಂಬ ನಿಬಂಧನೆಯನ್ನು ಅವುಗಳಿಗೆ ನೀಡುವ ಸೌಲಭ್ಯ ರಿಯಾಯಿತಿ ಮಂಜೂರಾತಿ ಆದೇಶಗಳಲ್ಲಿ ನಮೂದಿಸಲಾಗುತ್ತಿದೆ

ಸದರಿ ಘಟಕಗಳು ಕನ್ನಡಿಗರನ್ನು / ಸ್ಥಳೀಯರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ದೃಢಪಡಿಸಿಕೊಳ್ಳಲು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗುತ್ತಿದೆ

ಈ) ಒಟ್ಟು 71 ಬಹು ರಾಷ್ಟ್ರೀಯ ಕೈಗಾರಿಕಾ ಘಟಕಗಳ ಪೈಕಿ 5 ಘಟಕಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರಗಳಿಂದ ನೋಟೀಸನ್ನು ಜಾರಿ ಮಾಡಿ ಡಾ ಸರೋಜಿನಿ ಮಹಿಷಿ ವರದಿಯಂತೆ ಕನ್ನಡಿಗರಿಗೆ/ ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಮತ್ತು ಈಗಿರುವ ಕೊರತೆಯನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಲಾಗಿದೆ ವರದಿ ಬಂದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು

921 (1248) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೂ ಎಷ್ಟು ಜನ ಕನ್ನಡಿಗರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಒದಗಿಸಲಾಗಿದೆ ,

ಆ) ಯಾವ ಆಧಾರದ ಮೇಲೆ ಕನ್ನಡಿಗರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ ,

ಇ) ಶೇಕಡವಾರು ಎಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ಕಾಯ್ದಿರಿಸಲಾಗಿದೆ ,

ಈ) ಕನ್ನಡಿಗರಿಗೆ ಉದ್ಯೋಗ ನೀಡದಿರುವ ಕೈಗಾರಿಕೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ ಇದುವರೆಗೂ 50ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ 892 ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ 2,51,445 ಕನ್ನಡಿಗರಿಗೆ / ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸಿ ಕೊಡಲಾಗಿದೆ

ಆ) ಸರ್ಕಾರದ ಆದೇಶ ಸಂ ಸಿಐ/228/ಆರ್‌ಪಿಎಸ್/90/ ಬೆಂಗಳೂರು ದಿನಾಂಕ 21 4 1995ರನ್ವಯ ಯಾರು ರಾಜ್ಯದಲ್ಲಿ 15 ವರ್ಷ ವಾಸವಾಗಿರುವರೋ ಮತ್ತು ಕನ್ನಡ ಓದುವ ಬರೆಯುವ ಜ್ಞಾನವಿದೆಯೋ ಅಂತಹವರನ್ನು ಕನ್ನಡಿಗರೆಂದು ಪರಿಗಣಿಸಲಾಗುವುದು

ಇ) ಕನ್ನಡಿಗರಿಗೆ/ಸ್ಥಳೀಯರಿಗೆ ಕಾಯ್ದಿರಿಸಿರುವ ಹುದ್ದೆಗಳ ಪ್ರಮಾಣ (ಡಾ ಸರೋಜಿನಿ ಮಹಿಷಿ ವರದಿ ಪ್ರಕಾರ)

ಎ ಗುಂಪಿನ ಹುದ್ದೆಗಳಲ್ಲಿ ಶೇಕಡ 65

ಬಿ ಗುಂಪಿನ ಹುದ್ದೆಗಳಲ್ಲಿ ಶೇಕಡ 80

ಸಿ ಮತ್ತು ಡಿ ಗುಂಪಿನ ಹುದ್ದೆಗಳಲ್ಲಿ ಶೇಕಡ 100

ಈ) ಡಾ ಸರೋಜಿನಿ ಮಹಿಷಿ ವರದಿಯ ಪ್ರಕಾರ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕನ್ನಡಿಗರಿಗೆ / ಸ್ಥಳೀಯರಿಗೆ ಉದ್ಯೋಗ ನೀಡದೇ ಇರುವ ಒಟ್ಟು 127 ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ನೋಟೀಸ್‌ನ್ನು ನೀಡಿ (ಜೂನ್ 2005ರಲ್ಲಿ) ನಿಗದಿತ ಪ್ರಮಾಣಕ್ಕೆ ಸರಿದೂಗಿಸುವಂತೆ ಸೂಚನೆ ನೀಡಲಾಗಿದೆ

ಇದಕ್ಕೆ ಪ್ರತ್ಯುತ್ತರವಾಗಿ 7 ಜಿಲ್ಲೆಗಳ 64 ಘಟಕಗಳು ಕೊರತೆಯನ್ನು ಸರಿಪಡಿಸಿಕೊಂಡು ನಿಗದಿತ ಪ್ರಮಾಣದ ಉದ್ಯೋಗವನ್ನು ಕನ್ನಡಿಗರಿಗೆ ನೀಡಿರುತ್ತಾರೆ 8 ಜಿಲ್ಲೆಗಳ 53 ಘಟಕಗಳು ಮುಂದಿನ ನೇಮಕಾತಿಯಲ್ಲಿ ನ್ಯೂನತೆಯನ್ನು ಸರಿಪಡಿಸಿಕೊಳ್ಳುವುದಾಗಿ ಭರವಸೆ ನೀಡಿರುತ್ತಾರೆ

ಉಳಿದಂತೆ 6 ಘಟಕಗಳು ಮುಚ್ಚಲ್ಪಟ್ಟಿದ್ದು 4 ಘಟಕಗಳು ಮಾತ್ರ ಪ್ರತಿಕ್ರಿಯೆ (ವರದಿ) ನೀಡಿರುವುದಿಲ್ಲ ಸದರಿ 4 ಘಟಕಗಳಿಗೆ ಕೈಗಾರಿಕಾ ವಿಸ್ತರಣಾಧಿಕಾರಿಗಳು ಭೇಟಿ ನೀಡಿ ವರದಿ ಸಲ್ಲಿಸುವಂತೆ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ ವರದಿ ಬಂದ ನಂತರ ಸದರಿ ಘಟಕಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

822 (578) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಕೇಂದ್ರದಲ್ಲಿ ಮಿನಿ ವಿಧಾನಸೌಧ ನಿರ್ಮಾಣದ ಪ್ರಸ್ತಾವನೆಯು ಯಾವ ಹಂತದಲ್ಲಿದೆ ,